ಆ) ಸದರಿ ರಸ್ತೆಯನ್ನು ಎಷ್ಟು ದಿವಸಗಳಲ್ಲಿ ಪೂರ್ತಿಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ--ಧಾರವಾಡ (ರಾಷ್ಟ್ರೀಯ ಹೆದ್ದಾರಿ ನಂ.4) ಬೈಪಾಸ್ ರಸ್ತೆ ನಿರ್ಮಾಣದ ಪ್ರಥಮ ಹಂತದ 17.425ಕಿ.ಮೀ. ಉದ್ದದ ರಸ್ತೆಯ ಸಿ.ಡಿ. ಕೆಲಸವನ್ನು 1987ರಲ್ಲೂ ಹಾಗೂ ಬಲ್ಲಿ ಡಾಂಬರ್ ಕೆಲಸವನ್ನು 1990ರಲ್ಲೂ ಪ್ರಾರಂಭಿಸಲಾಗಿದೆ. ಈ 17.425 ಕಿ.ಮೀ. ರಸ್ತೆಯ ಸಿ.ಡಿ. ಕೆಲಸವು ಮುಗಿದಿರಿ: ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಆ) ಪ್ರಥಮ ಹಂತದ 17.425ಕಿ.ಮೀ. ದೂರದ ಬೈಪಾಸ್ ರಸ್ತೆ ಕೆಲಸವನ್ನು ಡಿಸೆಂಬರ್ 1993ರ ಬೇಳೆಗೆ ಮುಗಿಸುವ ಸಂಭವ ಇದೆ.

## ಕೃಷ್ಣ-ಕಾವೇರಿ ಯೋಜನೆಗೆ ಖರ್ಚಾದ ಹಣ

**442 (1307):** ಶ್ರೀ ಬಾಟಾಳ್ ನಾಗರಾಜ್ (ಚಾಮರಾಜನಗರ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಕೃಷ್ಣಾ ಕಾವೇರಿ ಯೋಜನೆಗಳಿಗೆ ಇದುವರೆಗೆ ಮಾಡಿರುವ ಖರ್ಚೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) 1992ರ ಡಿಸಂಬರ್ ಅಂತ್ಯದವರೆಗೆ ಮಾಡಿರುವ ಖರ್ಚು

| | (ಕೋಟಿ ರೂ.ಗಳಲ್ಲಿ) |
|---|---|
| 1. ಕೃಷ್ಣಾ ಯೋಜನೆಗಳು | 1987.55 |
| 2. ಕಾವೇರಿ ಯೋಜನೆಗಳು | 1243.23 |

## ಬೆಂಗಳೂರಿನಿಂದ -- ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿ.

**447 (1278):** ಶ್ರೀ ಡಿ.ಕೆ. ಶಿವಕುಮಾರ (ಸಾತನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಿಂದ ಕನಕಪುರ - ಮಳವಳ್ಳಿ, ಮೈಸೂರು ಮುಖಾಂತರ ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿಯನ್ನು ಸ್ಥಾಪಿಸಲು ಸರ್ಕಾರದ ಯೋಜನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಹೆದ್ದಾರಿ ಸ್ಥಾಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್. (ಲೋಕೋಪಯೋಗಿ ಸಚಿವರು):-

ಅ) ಇದೆ.

ಆ) ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಬಗ್ಗೆ ಶೀಘ್ರ ನಿರ್ಧಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

## ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ

**448 (1328):** ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ):-